**ದಿನಾಂಕಃ 17/12/2019 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 2 ರಿಂದ 4 ರವರ ಪರ ಶ್ರೀ ಎಸ್ ಎ ಕೆ ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ಓದಿದ್ದೇನೆ ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾವು ಖರೀದಿ ಪತ್ರವನ್ನು ಮಾಡಿಲ್ಲ, ನಮಗೆ ನ್ಯಾಯ ಸಿಗಬೇಕು ಎಂದು ಕೇಸ ಮಾಡಿದ್ದೇವೆ. ನಾನು 2 ಖರೀದಿ ಪತ್ರಗಳನ್ನು ರದ್ದು ಮಾಡಬೇಕೆಂದು ಕೇಳಿಕೊಂಡಿದ್ದೇನೆ . ಹಲಗೇರಿ ಗ್ರಾಮದ ಸರ್ವೇ ನಂ. 167 ಮತ್ತು 168 ಒಟ್ಟು 4 ಎಕೆರೆ 17 ಗುಂಟೆ ಜಮೀನಿಗೆ ಆದ ಖರೀದಿ ಪತ್ರವನ್ನು ರದ್ದು ಮಾಡಲು ಕೇಳಿಕೊಂಡಿದ್ದೇನೆ. 1 ನೇ ಪ್ರತಿವಾದಿಯು ಪ್ರತಿವಾದಿ 3 ಮತ್ತು 4 ರವರ ಪರವಾಗಿ ಜಮೀನಿನ ವಿಷಯವಾಗಿ ಖರೀದಿ ಪತ್ರ ಮಾಡಿಕೊಟ್ಟಿದ್ದಾರೆ ಖರೀದಿ ಪತ್ರದಲ್ಲಿ ಜಮೀನಿನ ಮಾರಾಟದ ಬೆಲೆಯನ್ನು ಎಷ್ಟು ತೋರಿಸಿದ್ದಾರೆ ಎಂದು ಗೊತ್ತಿಲ್ಲ ನಾನು ಆ ಖರೀದಿ ಪತ್ರವನ್ನು ನೋಡಿಲ್ಲ

ಸರ್ವೇ 167 ರ ಎರಡು ಹಿಸ್ಸೆಗಳು 3 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ. 168 ಎರಡು ಹಿಸ್ಸೆ ಗಳು 4 ನೇ ಪ್ರತಿವಾದಿಯ ಹೆಸರಿನಲ್ಲಿ ಇವೆ ಅವುಗಳ ಉತಾರವನ್ನು ನಾನು ನೋಡಿದ್ದೇನೆ. ಅವರ ಹೆಸರುಗಳು 4-5 ವರ್ಷಗಳ ಹಿಂದಿನಿಂದ ಉತಾರದಲ್ಲಿ ಬರುತ್ತಿವೆ. ಪ್ರತಿವಾದಿ 3 ಮತ್ತು 4 ಯಾವ ಆಧಾರದ ಮೇಲೆ ಉತಾರದಲ್ಲಿ ಬಂದಿವೆ ಎಂದು ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿಯು ನಮಗೆ ಅಂದರೆ ವಾದಿ 3 ರಿಂದ 5 ಹಾಗೂ ಪ್ರತಿವಾದಿ 5 ರವರಿಗೆ ಒಬ್ಬನೇ ಸಹೋದರ ಎಂದರೆ ಸರಿ. ನಮ್ಮ ಮದುವೆ ಆಗುವ ಮೊದಲಿನಿಂದಲೂ 1 ನೇ ಪ್ರತಿವಾದಿ ಮನೆಯ ವವಹಾರಗಳನ್ನು ನೋಡಿಕೊಳ್ಳುತ್ತಿದರು ಎಂದರೆ ಸರಿಯಲ್ಲ, ನನ್ನ ತಂದೆ ನೋಡಿಕೂಳ್ಳುತ್ತಿದ್ದರು. ನನ್ನ ಮದುವೆ 2016 ರಲ್ಲಿ ಆಗಿದೆ. ವಾದಿ 3 ರವರ ಮದುವೆ ನನಗಿಂತ

15 ವರ್ಷ ಮೊದಲು ಆಗಿದೆ. ನಾವೆಲ್ಲ ಹೆಣ್ಣು ಮಕ್ಕಳು ಮದುವೆಯಾದ ನಂತರ ಗಂಡನ ಮನೆಯಲ್ಲಿ ಇದ್ದೇವೆ ಎಂದರೆ ಸರಿ. ನನ್ನ ತಂದೆಗೆ ದಾವಾ ಆಸ್ತಿಗಳಲ್ಲದೆ ರಾಣೆಬೆನ್ನೂರಿನಲ್ಲಿ ಸರ್ವೇ ನಂ. 303/3, 303/2/2, 303/ಸಿ, ಸಿ ಟಿ ಎಸ್ ನಂ. 2983/ಡಿ ಹಾಗೂ 3010 ನನ್ನ ತಂದೆಯ ಹೆಸರಿನಲ್ಲಿ ಇವೆ ಎಂದರೆ ಸರಿಯಲ್ಲ. ನಾನು ಈ ಆಸ್ತಿಯ ಉತಾಗಳನ್ನು ನೋಡಿಲ್ಲ. ಇವತ್ತಿಗೂ ಆಸ್ತಿಗಳು ನನ್ನ ತಂದೆಯ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿಯಲ್ಲ.

ಹುಲ್ಲತ್ತಿಯ ಸಿ.ಎಸ್ ಬಿದರಿ, ಮತ್ತು ವೀರನಗೌಡ ಪಾಟೀಲ ಇವರು ನನಗೆ ಸಂಬಂದಿಕರಲ್ಲ. ನನ್ನ ತಂದೆಗೂ ಸಂಬಂದಿಕರು ಅಲ್ಲ. ಈ ಹಿಂದೆ ರಾಣೇಬೆನ್ನೂರ ನ್ಯಾಯಾಲಯದಲ್ಲಿ ಓ ಎಸ್ 274/2010 ಎನ್ನುವ ದಾವೆಯನ್ನು ಸುವರ್ಣಮ್ಮ ಗಂಡ ಚನ್ನಬಸಪ್ಪ ಚಿಂದಿ ಎನ್ನುವವರು ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪಂದಿರ ವಿರುದ್ದ ಮಾಡಿದ್ದರು ಎಂದರೆ ಸರಿ. ಆ ದಾವೆ 2013 ರಲ್ಲಿ ರಾಜಿ ಆಗಿದೇ ಎಂದರೆ ಸರಿ. ಆ ಪ್ರಕರಣದಲ್ಲಿ ನನ್ನ ತಂದೆಯ ಪರವಾಗಿ ಐ ಪಿ ಕುಳೇನೂರು ವಕೀಲರು ಹಾಜರಾಗುತ್ತಿದರು ಎಂದರೆ ಗೊತ್ತಿಲ್ಲ. ಸದರಿ ವಕೀಲರು ನನ್ನ ತಂದೆಯ ಖಾಯಂ ವಕೀಲರು ಮತ್ತು ಪರಿಚಯದವರು ಎಂದರೆ ಗೊತ್ತಿಲ್ಲ.

ನಮ್ಮ ತಂದಗೆ 6-7 ವರ್ಷದಿಂದ ಆರೋಗ್ಯ ಸರಿ ಇರಲಿಲ್ಲ. ಅವರಿಗೆ ಸಕ್ಕರೆ ಕಾಯಿಲೆ ಬಿ.ಪಿ ಇತ್ತು. ಅವರಿಗೆ ಖಾಯಿಲೆ ಇರುವುದರಿಂದ ಮನೆಯ ವ್ಯವಹಾರಗಳನ್ನು ಆಸ್ತಿಗಳ ವ್ಯವಹಾರ ಮಾಡಲು ನನ್ನ ತಾಯಿ ತಂದೆ, ಹಾಗೂ ನಾವೆಲ್ಲರೂ ಸೇರಿ 1 ನೇ ಪ್ರತಿವಾದಿಗೆ ಅಧಿಕಾರ ಪತ್ರ ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಈ ವಿಷಯ ನಮಗೆ ಗೊತ್ತಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಗೆ ವ್ಯವಸಾಯ ಬಿಟ್ಟರೇ ಬೇರೆ ಆದಾಯ ಇರಲಿಲ್ಲ. ನನ್ನ ತಂದೆಗೆ

ಹಲಗೇರಿಯಲ್ಲಿ ಇದ್ದ ಜಮೀನುಗಳು ನೀರಾವರಿ ಜಮೀನು ಇರುತ್ತದೆ. ಸರ್ವೇ ನಂ. 167 ರಲ್ಲಿ ಬೋರ್ ಹಾಕಿಸಿದ್ದೇವೆ. ಬೋರನ್ನು 2–3 ವರ್ಷಗಳ ಹಿಂದೆ ಹಾಕಿಸಿದ್ದೇವೆ. ಅದಕ್ಕೆ ಕೆ ಇ ಬಿ ಕರೆಂಟ್ ತೆಗೆದುಕೊಂಡಿದ್ದೇವೆ. ಆ ಬಗ್ಗೆ ದಾಖಲೆಗಳು ನನ್ನ ತಂದೆಯ ಬಳಿ ಇರಬಹುದು. ಆ ಸರ್ವೇ ನಂಬರನ ಪಹಣಿಯಲ್ಲಿ ಕೊಳವೆ ಬಾವಿ ಎಂದು ನಮೂದು ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಹಲಗೇರಿಯ ಯಾವುದೇ ಜಮೀನುಗಳು ನೀರಾವರಿ ಇಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕೆ ಪಹಣಿಯಲ್ಲಿ ಕೊಳವೆ ಬಾವಿ ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಜಮೀ ನುಗಳಳಿಗೆ ನೀರಾವರಿ ಸೌಲಭ್ಯ ಇದೆ ಎಂದು ದಾಖಲೆ ಹಾಜರಪಡಿಸಬಹದು ಹಾಜರಪಡಿಸಲು ಯಾವುದೇ ತೊಂದರೆ ಇಲ್ಲ. ನನ್ನ ತಂದೆಗೆ ರಾಣೇಬೆನ್ನೂರಿನ ಕರ್ನಾಟಕ ಬ್ಯಾಂಕನಲ್ಲಿ ಖಾತೆ ಇದ್ದ ಬಗ್ಗೆ ಮಾಹಿತಿ ಇಲ್ಲ. ಅಲ್ಲಿ ನಮ್ಮ ತಂದೆಯ ಹೆಸರಿನಲ್ಲಿ ಎಫ್ ಡಿ ಗಳು ಇವೆ ಎಂದರೆ ಸರಿಯಲ್ಲ. 2014 ರಲ್ಲಿ ಒಟ್ಟು 17 ಲಕ್ಷ 90 ಸಾವಿರ ರೂಗಳು ಆ ಬ್ಯಾಂಕಿನಲ್ಲಿ ನನ್ನ ತಂದೆಯ ಹೆಸರಿನಲ್ಲಿ ಎಫ್.ಡಿ ಇತ್ತು ಎಂದರೆ ಸರಿಯಲ್ಲ. ಅದೇ ರೀತಿ 2 ನೇ ವಾದಿಯಹೆಸನರರಲ್ಲಿ ಸೆಂಟ್ರಲ್ ಬ್ಯಾಂಕ ಆಫ್ ಇಂಡಿಯಾದಲ್ಲಿ 6 ಲಕ್ಷ ರೂಗಳ ಎಫ್ ಡಿ ಇತ್ತು ಎಂದರೆ ಸರಿಯಲ್ಲ. ಕರ್ನಾಟಕ ಬ್ಯಾಂಕಿನಲ್ಲಿದ್ದ ಎಫ್ ಡಿ ಹಣವನ್ನು ನನ್ನ ತಂದೆ ತೀರಿಕೊಂಡ ನಂತರ ನಾಮಿನಿ ಇದ್ದವರು ಬಿಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಈ ಎಲ್ಲ ವಿಷಯಗಳು ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎರಡೂ ಬ್ಯಾಂಕಿನಲ್ಲಿದ್ದ ಹಣ ದಾವಾ ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣ ಎಂದರೆ ಸರಿಯಲ್ಲ. 1 ನೇ ಪ್ರ 2 ವಾದಿ ಆಸಿತಗಳನ್ನು ಮಾರಾಟ ಮಾಡಿ ಬಂದ ಹಣವನ್ನು ನಮ್ಮ ತಂದೆಯ ಕೈಯಲ್ಲಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನನ್ನ ತಾಯಿ ಹೆಸರಿನಲ್ಲಿ ಆ ಹಣವನ್ನು ಎಫ್ ಡಿ ಇಟ್ಟಿದ್ದರು ಎಂದರೆ

ಸರಿಯಲ್ಲ. ಪ್ರತಿವಾದಿ 2 ರಿಂದ 4 ರವರು ನಾವು ಬರೆದುಕೊಟ್ಟ ಅಧಿಕಾರ ಪತ್ರವನ್ನು ಪರಿಶೀಲಿಸಿ ಮತ್ತು ದಾವಾದ ಆಸ್ತಿಯ ದಾಖಲೆಗಳನ್ನು ಪರಿಶೀಲಿಸಿ ಒಳ್ಳೆ ಭಾವನೆಯಿಂದ ಆಸ್ತಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ.

ಅನುಸೂಚಿ-ಅ ಅದಲ್ಲಿನ 1 ನೇ ಸ್ವತ್ತನ್ನು 3 ನೇ ಪ್ರತಿವಾದಿಯು 4 ಲಕ್ಷ 50 ಸಾವಿರ ರೂಗಳಿಗೆ ಖರೀದಿಸಿದ್ದಾರೆ. ಅದೇ ರೀತಿ ಅನುಸೂಚಿ -ಅ ದಲ್ಲಿನ 3 ನೇ ಸ್ವತ್ತನ್ನು ಪ್ರತಿವಾದಿ 3 ರವರು 3 ಲಕ್ಷ 90 ಸಾವಿರ ರೂಗಳಿಗೆ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ 4 ನೇ ಪ್ರತಿವಾದಿ ಅನುಸೂಚಿ-ಅ ದಲ್ಲಿನ ಆಸ್ತಿ ಸಂಖ್ಯೆ 2 ಮತ್ತು 4 ಇವುಗಳನ್ನು 4 ಲಕ್ಷ 89 ಸಾವಿರ ಹಾಗೂ 3 ಲಕ್ಷ 90 ಸಾವಿರ ರೂಗಳಿಗೆ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಅನುಸೂಚಿ-ಬಿ 1 ನೇ ಸ್ವತ್ತನ್ನು 2 ನೇ ಪ್ರತಿವಾದಿಯು 9 ಲಕ್ಷ 26 ಸಾವಿರ ರೂಗಳಿಗೆ ಖರೀಧಿಸಿದ್ದಾರೆ ಎಂದರೆ ಸರಿಯಲ್ಲ. ನಂತರ 2 ನೇ ಪ್ರತಿವಾದಿಯು ಅದೇ ಆಸ್ತಿಯನ್ನು ದಿಃ 14-03-2019 ರಂದು 11 ಲಕ್ಷ 5 ಸಾವಿರ ರೂಗಳಿಗೆ 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಆ ಸ್ವತ್ತಿನ ಸಿ ಟಿ ಎಸ್ ಉತಾರದಲ್ಲಿ 1 ನೇ ಪ್ರತಿವಾದಿಯ ಹೆಸರು ಖರೀದಿದಾರರು ಎಂದು ನಮೂದು ಆಗಿದೆ ಎಂದರೆ ಸರಿಯಲ್ಲ. ಪ್ರತಿವಾದಿ 3, 4 ಮತ್ತು 1 ನೇ ಪ್ರತಿವಾದಿ ಅನೂಸೂಚಿ -ಅ ಮತ್ತು ಬ ಗಳಲ್ಲಿ ಕ್ರಮಾವಾಗಿ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ ನಾವು ಇದ್ದೇವೆ. ಈ ವಿಚಾರವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ವಿರುದ್ಧ ದ್ವೇಷ ಸಾಧಿಸುವ ಉದ್ದೇಶದಿಂದ ಆತನ ವಿರುದ್ಧ ಹಾಗೂ ಖರೀದಿದಾರರ ವಿರುದ್ಧ ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತಾರದಲ್ಲಿ ಪ್ರತಿವಾದಿ 3, 4 ಹಾಗೂ 1 ಇವರುಗಳ ಹೆಸರುಗಳು ಇದ್ದರೂ ಸಹ

ಅದನ್ನು ನಿರಾಕರಿಸಿ ಒಂದು ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಅವರಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ದಾವಾ ಆಸ್ತಿಗಳಲ್ಲಿ ಹಕ್ಕು ಪ್ರಾಪ್ತವಾಗಿದೆ ಎಂದರೆ ಸರಿಯಲ್ಲ.

ಉಳಿದಂತೆ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿಕೊಳ್ಳಲಾಗಿದೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.